**ದಿನಾಂಕಃ 20.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎಂ.ಎನ್ ವಕೀಲರಿಂದಃ**

ನನ್ನ ಗಂಡನ ಹೆಸರನ್ನು ಶ್ರೀನಿವಾಸ ಯಾನೆ ಶ್ರೀನಿವಾಸಯ್ಯ ಎಂದು ಕರೆಯುತ್ತಾರೆ ಎಂದರೆ ಸರಿ. ನನ್ನ ಮಾವನ ಹೆಸರು ರಂಗಯ್ಯ ಎಂದರೆ ಸರಿ. 1 ನೇ ಪ್ರತಿವಾದಿಯು ನನ್ನ ಅತ್ತೆ. ಸದರಿ 1 ನೇ ಪ್ರತಿವಾದಿಯು ಈ ದಾವೆ ಸಲ್ಲಿಸಿದ್ದ ನಂತರ ಮರಣ ಹೊಂದಿರುತ್ತಾರೆ. 2 ನೇ ಪ್ರತಿವಾದಿಯು ನನ್ನ ಗಂಡನ ಸಹೋದರಿ ಎಂದರೆ ಸರಿ. 3 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಮಗಳು ಎಂದರೆ ಸರಿ. ನನ್ನ ಗಂಡ ದಿನಾಂಕ 28.12.2005 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ಗಂಡ ಮರಣ ಹೊಂದುವ ಕಾಲದಲ್ಲಿ ಪೆಟಿಂಗ್ ಕೆಲಸ ಮಾಡುತ್ತಿದ್ದರು. 1 ನೇ ಪ್ರತಿವಾದಿಯು ಮರಣ ಹೊಂದುವವರೆಗೂ ಸದರಿಯವರು ದಾವಾ-2 ನೇ ಅನುಸೂಚಿ ಸ್ವತ್ತಿನಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ.

ನನ್ನ ಗಂಡ ಮರಣ ಹೊಂದುವವರೆಗೂ ನಾನು ಬೆಂಗಳೂರಿನಲ್ಲಿ ವಾಸಿಸುತ್ತಿದ್ದೆನು. ಈಗ ನಾನು ನನ್ನ ಮಗಳ ಮನೆ ಇರುವ ಮೈಸೂರಿನಲ್ಲಿ ವಾಸಿಸುತ್ತಿದ್ದೇನೆ. ನಾನು ಎಷ್ಟು ಆಸ್ತಿಗಳಿಗೆ ಈ ದಾವೆ ಸಲ್ಲಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತುಗಳಿಗೆ ಬನ್ನೂರು ಪುರಸಭೆಯಿಂದ ಖಾತಾ ದಾಖಲಾತಿಗಳನ್ನು ತಂದು ಹಾಜರುಪಡಿಸಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತುಗಳು ಖಾತಾ ದಾಖಲಾತಿಗಳನ್ನು ನೀಡುವಂತೆ ಕೋರಿ ನಾನು ಬನ್ನೂರು ಪುರಸಭೆಯವರಿಗೆ ಅರ್ಜಿ ಸಲ್ಲಿಸಿದ್ದೆನು. ಸದರಿ ಅರ್ಜಿಯ ನಕಲನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತುಗಳ ಖಾತೆ ಸಂಖ್ಯೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತುಗಳ ವಿಸ್ತೀರ್ಣ 20 X 40, 20 X 40 ಮತ್ತು 40 X 19 ಆಗಿರುತ್ತದೆ.

ನನ್ನ ಗಂಡನ ಜೀವಿತಾವಧಿಯಲ್ಲಿ ದಾವಾ ಅನುಸೂಚಿ ಸ್ವತ್ತುಗಳನ್ನು ಅಭಿವೃದ್ಧಿಪಡಿಸಿರುವ ಬಗ್ಗೆ ದಾಖಲಾತಿಗಳು ಇರುವುದಿಲ್ಲ. ದಾವಾ-3 ನೇ ಅನುಸೂಚಿ ಸ್ವತ್ತಿನಲ್ಲಿ ಅಂಗಡಿ ಮಳಿಗೆಗಳನ್ನು ನನ್ನ ಗಂಡ ನಿರ್ಮಿಸಿದ್ದಾನೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಾನು 1983-84 ರಲ್ಲಿ ವಿವಾಹವಾಗಿರುತ್ತೇನೆ. ನಾನು ವಿವಾಹವಾದ ನಂತರ ನಾನು ಬನ್ನೂರಿನಲ್ಲಿ ವಾಸಿಸುತ್ತಿದ್ದೆನು. ನಾನು ಮತ್ತು ನನ್ನ ಗಂಡ ಬನ್ನೂರಿನಲ್ಲಿ ಸುಮಾರು 3 ವರ್ಷಗಳ ಕಾಲ ವಾಸಿಸುತ್ತಿದ್ದೆವು. ಸದರಿ 3 ವರ್ಷಗಳ ನಂತರ ನಾನು ಮತ್ತು ನನ್ನ ಗಂಡ ಜೀವನ ಮಾಡಲು

ಬೆಂಗಳೂರಿಗೆ ಹೋಗಿ ನೆಲೆಸಿದ್ದೆವು. ನಾವು ಬೆಂಗಳೂರಿನಲ್ಲಿ ನನ್ನ ಗಂಡ ಮರಣ ಹೊಂದುವವರೆಗೂ ವಾಸಿಸುತ್ತಿದ್ದೆವು. ನಾನು ಈ ದಾವೆ ಸಲ್ಲಿಸುವ ಸಂದರ್ಭದಲ್ಲಿ ಮೈಸೂರಿನಲ್ಲಿ ವಾಸಿಸುತ್ತಿದ್ದೆನು. ನಾನು ನನ್ನ ವಾದಪತ್ರದಲ್ಲಿ ಶಿವಮೊಗ್ಗ ವಿಳಾಸದಲ್ಲಿ ವಾಸಿಸುತ್ತಿದ್ದೇನೆ ಎಂದು ನಮೂದಿಸಿದ್ದೇನೆ ಎಂದರೆ ಸರಿ.

ನನ್ನ ಗಂಡನ ಜೀವಿತಾವಧಿಯಲ್ಲಿ ಅವರ ಕುಟುಂಬದಲ್ಲಿಆಸ್ತಿಗಳಿಗೆ ಸಂಬಂಧಿಸಿದಂತೆ ಏನೆಲ್ಲಾ ಮಾತುಕತೆ ಆಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿದಾರರು ಮುಂದುವರೆದು ಯಾವುದೇ ಮಾತುಕತೆ ಆಗಿಲ್ಲ, ಆದರೆ ನನ್ನ ಗಂಡ ಆಗಾಗ 1 ನೇ ಪ್ರತಿವಾದಿಗೆ ಹಣ ನೀಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಗಂಡ 1 ನೇ ಪ್ರತಿವಾದಿಗೆ ಹಣ ನೀಡುತ್ತಿದ್ದ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ನಾನು 2019 ರಲ್ಲಿ ಪ್ರತಿವಾದಿಗಳನ್ನು ಭೇಟಿಯಾಗಿ ದಾವಾ ಅನುಸೂಚಿ ಸ್ವತ್ತುಗಳಲ್ಲಿ ವಿಭಾಗ ನೀಡುವಂತೆ ಕೇಳಿಕೊಂಡಿದ್ದೆನು. ನನಗೆ ಮತ್ತು ಇತರ ವಾದಿಗಳಿಗೆ ದಾವಾ ಅನುಸೂಚಿ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮೇಳಿ ಸುಬ್ಬಯ್ಯ ಮತ್ತು ಚಿಕ್ಕ ಚೆಲುವಮ್ಮ ಗಂಡ-ಹೆಂಡತಿ ಎಂದರೆ ಸರಿ. ಸದರಿ ಮೇಳಿ ಸುಬ್ಬಯ್ಯ ಮತ್ತು ಚಿಕ್ಕ ಚೆಲುವಮ್ಮರವರಿಗೆ ರಂಗಯ್ಯ, ಗೋವಿಂದಯ್ಯ, ಅಲುಮೆಲಮ್ಮ, ರುಕ್ಕಮ್ಮ ಮತ್ತು ಗೌರಮ್ಮ ಎಂಬ 5 ಜನ ಮಕ್ಕಳು ಎಂದರೆ ಸರಿ. ಸದರಿಯವರಲ್ಲಿ ರಂಗಯ್ಯರವರು ದಿನಾಂಕ 27.04.1992 ರಲ್ಲಿ ಮರಣ ಹೊಂದಿದ್ದಾರೆ ಎಂದರೆ ಸರಿ. ಮೇಳಿ ಸುಬ್ಬಯ್ಯರವರು ತಮ್ಮ ಜೀವಿತಾವಧಿಯಲ್ಲಿ ತಮ್ಮ ಮತ್ತು ತಮ್ಮ ಮಕ್ಕಳ ನಡುವೆ ಪಂಚಾಯತ್ ಪಾಲುಪಾರೀಕತ್ ಮೂಲಕ ತಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ವಿಭಾಗದಲ್ಲಿ ದಾವಾ ಅನುಸೂಚಿ ಸ್ವತ್ತುಗಳು ರಂಗಯ್ಯರವರ ಭಾಗಕ್ಕೆ ಬಂದವು ಎಂದರೆ ಸರಿ.

ನನ್ನ ಗಂಡನ ಜೀವಿತಾವಧಿಯಲ್ಲಿ ನನ್ನ ಗಂಡ, 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯು ತಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡನ ಜೀವಿತಾವಧಿಯಲ್ಲಿ ಸರ್ವೆ ನಂ.460/2 ರಲ್ಲಿ 12 ಗುಂಟೆ ಜಮೀನು ನನ್ನ ಗಂಡನ ಸ್ವಾಧೀನತೆಯಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ.460/2 ರಲ್ಲಿ 12 ಗುಂಟೆ ಜಮೀನನ್ನು ನನ್ನ ಗಂಡ ದಿನಾಂಕ 31.01.1994 ರ ನೋಂದಾಯಿತ ಕ್ರಯಪತ್ರದ ಮೂಲಕ ಎಂ.ಸಿ ಚೆಲುವರಾಜು ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ, 1 ನೇ ಪ್ರತಿವಾದಿ

ಮತ್ತು 2 ನೇ ಪ್ರತಿವಾದಿಗಳ ನಡುವೆ ನಡೆದಿದ್ದ ವಿಭಾಗದಲ್ಲಿ ಸರ್ವೇ ನಂ.460/2 ರಲ್ಲಿ 12 ಗುಂಟೆ ಜಮೀನು ನನ್ನ ಗಂಡನ ಭಾಗಕ್ಕೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ 1 ಮತ್ತು 3 ನೇ ದಾವಾ ಅನುಸೂಚಿ ಸ್ವತ್ತುಗಳು 2 ನೇ ಪ್ರತಿವಾದಿಯ ಭಾಗಕ್ಕೆ ಬಂದಿದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ದಾವಾ-2 ನೇ ಅನುಸೂಚಿ ಸ್ವತ್ತು 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿದಾರರು ಮುಂದುವರೆದು 1 ನೇ ಪ್ರತಿವಾದಿಯು ದಾವಾ-2 ನೇ ಅನುಸೂಚಿ ಸ್ವತ್ತಿನಲ್ಲಿ ವಾಸಿಸುತ್ತಿದ್ದರು ಎಂದು ನುಡಿಯುತ್ತಾರೆ. ನಾವು ವಿವಾಹವಾದ 3 ವರ್ಷಗಳ ನಂತರ ಬೆಂಗಳೂರಿಗೆ ಹೋಗಿ ನೆಲೆಸಿದ್ದ ನಂತರ ನಾವು ಆಗಾಗ ಹಬ್ಬಗಳಿಗೆ ಮಾತ್ರ ಬನ್ನೂರಿಗೆ ಬರುತ್ತಿದ್ದೆವು. ನಾನು ಬನ್ನೂರಿನಲ್ಲಿ ವಾಸಿಸುತ್ತಿದ್ದೆನು ಎಂದು ತೋರಿಸಲು ದಾಖಲಾತಿಗಳು ಇರುತ್ತವೆ. ಆದರೆ ಅವುಗಳನ್ನು ಹಾಜರುಪಡಿಸಿರುವುದಿಲ್ಲ.

ನನ್ನ ಗಂಡ ಶ್ರೀನಿವಾಸ ಯಾನೆ ಶ್ರೀನಿವಾಸಯ್ಯ ಮತ್ತು 1 ನೇ ಪ್ರತಿವಾದಿಯು ದಾವಾ-1 ಮತ್ತು ದಾವಾ-3 ನೇ ಅನುಸೂಚಿ ಸ್ವತ್ತುಗಳನ್ನು 2 ನೇ ಪ್ರತಿವಾದಿಗೆ ದಾನ ಮಾಡಿ ದಿನಾಂಕ 22.11.1993 ರ ಪಂಚಾಯತಿ ದಾನಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1993 ರಿಂದ ಇಲ್ಲಿಯವರೆಗೂ ದಾವಾ-1 ಮತ್ತು 3 ನೇ ಅನುಸೂಚಿ ಸ್ವತ್ತುಗಳು 2 ನೇ ಪ್ರತಿವಾದಿಯ ಸ್ವಾಧೀನತೆಯಲ್ಲಿ ಇವೆ ಎಂದರೆ ನನಗೆ ಗೊತ್ತಿಲ್ಲ. ದಾವಾ-1 ಮತ್ತು 3 ನೇ ಅನುಸೂಚಿ ಸ್ವತ್ತುಗಳ ಖಾತೆಗಳು 2 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಾಗಿವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ-1 ಮತ್ತು 3 ನೇ ಅನುಸೂಚಿ ಸ್ವತ್ತುಗಳಿಗೆ 2 ನೇ ಪ್ರತಿವಾದಿಯು ಕಂದಾಯ ಪಾವತಿಸುತ್ತಿದ್ದಾರೆ ಎಂದರೆ ಸಾಕ್ಷಿದಾರರು ದಾವಾ ಅನುಸೂಚಿ ಸ್ವತ್ತುಗಳಲ್ಲಿ ಬಾಡಿಗೆ ಬರುತ್ತದೆ, ಹಾಗಾಗಿ 2 ನೇ ಪ್ರತಿವಾದಿಯು ಕಂದಾಯ ಪಾವತಿಸುತ್ತಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಗಂಡ ಮರಣ ಹೊಂದುವ ಪೂರ್ವದಲ್ಲಿಯೇ 2 ನೇ ಪ್ರತಿವಾದಿಯು ದಾವಾ-1 ಮತ್ತು 3 ನೇ ಅನುಸೂಚಿ ಸ್ವತ್ತುಗಳಲ್ಲಿ ಸ್ವಾಧೀನತೆ ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ. 2005 ರಿಂದ 2020 ರವರೆಗೆ ದಾವಾ ಅನುಸೂಚಿ ಸ್ವತ್ತುಗಳ ಬಗ್ಗೆ ಏನಾದರೂ ಕ್ರಮ ಕೈಗೊಂಡಿದ್ದೀರಾ ಎಂದರೆ ಸಾಕ್ಷಿದಾರರು ನನ್ನ ಅತ್ತೆಯು ಬದುಕಿದ್ದರಿಂದ ಅವರು ಜೀವನ ಮಾಡಲಿ ಎಂದು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯು ಹೆಬ್ಬೆಟ್ಟು ಗುರುತು ಹಾಕುತ್ತಿದ್ದರು ಎಂದರೆ ಸರಿ. ನನ್ನ ಗಂಡ ಬಿ.ಆರ್ ಶ್ರೀನಿವಾಸಯ್ಯ ಎಂದು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ಕನ್ನಡದಲ್ಲಿ

ಮಾತ್ರ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಗಂಡ ಸಹಿ ಮಾಡಿದ್ದ ದಾಖಲಾತಿಗಳು ನನ್ನ ಬಳಿ ಇರುತ್ತವೆ. ಸದರಿ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಶ್ರೀನಿವಾಸ ಬಿ.ಆರ್ ಬಿನ್ ರಂಗಯ್ಯ ಎಂದರೆ ನನ್ನ ಗಂಡ. ಸಾಕ್ಷಿದಾರರಿಗೆ ದಿನಾಂಕ 18.10.1995 ರ ನೋಂದಾಯಿತ ದಾನಪತ್ರವನ್ನು ತೋರಿಸಿ ಸದರಿ ದಾಖಲಾತಿಯಲ್ಲಿ ಇರುವಂತೆ ನನ್ನ ಗಂಡ ಶ್ರೀನಿವಾಸ ಯಾನೆ ಶ್ರೀನಿವಾಸಯ್ಯರವರು ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ಗಂಡ ಬಿ.ಕಾಂವರೆಗೂ ವಿಧ್ಯಾಭ್ಯಾಸ ಮಾಡಿದ್ದರು. ನನ್ನ ಗಂಡನಿಗೆ ಕನ್ನಡ ಮತ್ತು ಆಂಗ್ಲ ಭಾಷೆ ಚೆನ್ನಾಗಿ ಬರುತ್ತಿತ್ತು. ದಿನಾಂಕ 18.10.1995 ರ ನೋಂದಾಯಿತ ದಾನಪತ್ರದ ಮೂಲಕ ನನ್ನ ಗಂಡ ಮತ್ತು ನನ್ನ ಅತ್ತೆ 1 ನೇ ಪ್ರತಿವಾದಿಯು ದಾವಾ-3 ನೇ ಅನುಸೂಚಿ ಸ್ವತ್ತನ್ನು 2 ನೇ ಪ್ರತಿವಾದಿಗೆ ದಾನ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ದಿನಾಂಕ 18.10.1995 ರ ನೋಂದಾಯಿತ ದಾನಪತ್ರದ ವಿಚಾರವು ನನ್ನ ಗಂಡನಿಗೆ ತಿಳಿದಿತ್ತು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ದಾನಪತ್ರಗಳನ್ನು ಪ್ರಶ್ನಿಸಿ ನಾನು ಯಾವುದೇ ದಾವೆ ಸಲ್ಲಿಸಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಸದರಿ ದಾನಪತ್ರಗಳನ್ನು ಮೋಸ ಮಾಡಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿರುವ ಖಾತೆಗಳನ್ನು ಪ್ರಶ್ನಿಸಿ ನಾನು ಯಾವುದೇ ಪ್ರಕರಣ ದಾಖಲು ಮಾಡಿರುವುದಿಲ್ಲ.

ಈ ದಾವೆಯಲ್ಲಿ ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದಪತ್ರವನ್ನು ನಾನು ಓದಿಸಿ ತಿಳಿದುಕೊಂಡಿರುವುದಿಲ್ಲ. 2 ನೇ ಪ್ರತಿವಾದಿಯು 3 ನೇ ಪ್ರತಿವಾದಿಗೆ ದಾವಾ-1 ನೇ ಅನುಸೂಚಿ ಸ್ವತ್ತನ್ನು ದಾನ ಮಾಡಿ ದಿನಾಂಕ 29.04.2005 ರ ನೋಂದಾಯಿತ ದಾನಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ-1 ನೇ ಅನುಸೂಚಿ ಸ್ವತ್ತಿನಲ್ಲಿ ಇದ್ದ ಮಂಗಳೂರು ಹಂಚಿನ ಮನೆಯನ್ನು ಒಡೆದು ಹಾಕಿ ಸದರಿ ಜಾಗದಲ್ಲಿ 4 ಮನೆಗಳನ್ನು 3 ನೇ ಪ್ರತಿವಾದಿಯು ನಿರ್ಮಿಸಿದ್ದಾರೆ ಎಂದರೆ ಸರಿ. ಸದರಿ ಮನೆಗಳಲ್ಲಿ ಬರುವ ಬಾಡಿಗೆಯನ್ನು 3 ನೇ ಪ್ರತಿವಾದಿಯು ಸ್ವೀಕರಿಸುತ್ತಿದ್ದಾರೆ ಎಂದರೆ ಸರಿ. ಸದರಿ 4 ಮನೆಗಳನ್ನು 3 ನೇ ಪ್ರತಿವಾದಿಯೇ ಖರ್ಚು ಮಾಡಿ ನಿರ್ಮಿಸಿದ್ದಾರೆ ಎಂದರೆ ಸರಿ.

ದಾವಾ-3 ನೇ ಅನುಸೂಚಿ ಸ್ವತ್ತಿನಲ್ಲಿ ಮಳಿಗೆಗಳು ಇವೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಸುಮಾರು 30 ವರ್ಷಗಳಿಂದ ಸದರಿ ಮಳಿಗೆಗಳು ಇವೆ ಎಂದು ನುಡಿಯುತ್ತಾರೆ. ಸದರಿ ದಾವಾ-3 ನೇ ಅನುಸೂಚಿ ಸ್ವತ್ತಿನಲ್ಲಿರುವ ಮಳಿಗೆಗಳ ಬಾಡಿಗೆಯನ್ನು 2 ನೇ ಪ್ರತಿವಾದಿ

ಸ್ವೀಕರಿಸುತ್ತಿದ್ದಾರೆ ಎಂದರೆ ಸಾಕ್ಷಿದಾರರು ಮೊದಲು 1 ನೇ ಪ್ರತಿವಾದಿ ಸ್ವೀಕರಿಸುತ್ತಿದ್ದರು, ಅವರ ಮರಣಾನಂತರ 2 ನೇ ಪ್ರತಿವಾದಿಯು ಬಾಡಿಗೆಯನ್ನು ಸ್ವೀಕರಿಸುತ್ತಿದ್ದಾರೆ ಎಂದು ನುಡಿಯುತ್ತಾರೆ. ದಾವಾ-3 ನೇ ಅನುಸೂಚಿ ಸ್ವತ್ತುಗಳಲ್ಲಿ 1 ನೇ ಪ್ರತಿವಾದಿಯು ಎಂದಿಗೂ ಬಾಡಿಗೆಯನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳಲ್ಲಿ ಮನೆಗಳನ್ನು ಮತ್ತು ಮಳಿಗೆಗಳನ್ನು ನಿರ್ಮಿಸಲು ನಿವೇನಾದರೂ ಹಣ ನೀಡಿದ್ದೀರಾ ಎಂದರೆ ಸಾಕ್ಷಿದಾರರು ನಾನು ಯಾವುದೇ ಹಣವನ್ನು ನೀಡಿಲ್ಲ, ಆದರೆ ನನ್ನ ಗಂಡ ಹಣ ನೀಡಿದ್ದಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ಬದುಕಿರುವವರೆಗೂ 2 ಮತ್ತು 3 ನೇ ಪ್ರತಿವಾದಿಗಳೇ ಅವರ ಯೋಗಕ್ಷೇಮವನ್ನು ನೋಡಿಕೊಂಡಿದ್ದಾರೆ ಎಂದರೆ ಸಾಕ್ಷಿದಾರರು ನಾವು ಸಹ 1 ನೇ ಪ್ರತಿವಾದಿಯ ಯೋಗಕ್ಷೇಮವನ್ನು ನೋಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ.

ಈ ದಾವೆ ಚಾಲ್ತಿಯಲ್ಲಿದ್ದ ಸಂದರ್ಭದಲ್ಲಿ ನಾನು ಪ್ರತಿವಾದಿಗಳ ವಿರುದ್ಧ ಒಂದು ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಪ್ರತಿವಾದಿಗಳು ನನ್ನ ಮೇಲೆ ಗಲಾಟೆ ಮಾಡಿದ್ದರಿಂದ ದೂರು ನೀಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಪ್ರತಿವಾದಿಗಳು ಯಾವುದೇ ಗಲಾಟೆ ಮಾಡದೇ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಸುಳ್ಳು ದೂರು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡನ ಜೀವಿತಾವಧಿಯಲ್ಲಿಯೇ ಕುಟುಂಬದ ಆಸ್ತಿಗಳು ವಿಭಾಗವಾಗಿರುವುದರಿಂದ ಮತ್ತು ನನ್ನ ಗಂಡನ ಜೀವಿತಾವಧಿಯಲ್ಲಿಯೇ ನನ್ನ ಗಂಡನು ಕ್ರಮಬದ್ಧವಾಗಿ ದಾನಪತ್ರಗಳನ್ನು ಬರೆದುಕೊಟ್ಟಿರುವುದರಿಂದ ದಾವಾ ಅನುಸೂಚಿ ಸ್ವತ್ತುಗಳಲ್ಲಿ ನಮಗೆ ಯಾವುದೇ ರೀತಿಯ ಹಕ್ಕು ಅಥವಾ ಭಾಗ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ.